# <u>ಕರ್ನಾಟಕ ವಿಧಾನ ಪರಿಷತ್ತು</u>

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 987 |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 03. | ಉತ್ತರಿಸುವ ದಿನಾಂಕ | : | 24-02-2022 |
| 04. | ಉತ್ತರಿಸುವ ಸಚಿವರು | : | ಮಾನ್ಯ ಗೃಹ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯ ಸರ್ಕಾರದ ಹಿರಿಯ ಸಚಿವರೊಬ್ಬರು ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿ, ದೇಶದ್ರೋಹದ ಮಾತನಾಡಿ ಪ್ರಚೋದನಕಾರಿ ಹೇಳಿಕೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ದಿನಾಂಕ:16.02.2022 ರಂದು ಅರ್ಜಿದಾರರಾದ ಶ್ರೀ ಮೊಹಮ್ಮದ್ ಹ್ಯಾರಿಸ್ ನಲಪಾಡ್, ಅಧ್ಯಕ್ಷರು, ಕೆ.ಪಿ.ವೈ.ಸಿ.ಸಿ. ಬೆಂಗಳೂರುರವರು ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ನೀಡಿದ ದೂರನ್ನು ಪಡೆದು, ಪರಿಶೀಲಿಸಲಾಗಿ ಅರ್ಜಿಯಲ್ಲಿ ಶ್ರೀ.ಕೆ.ಎಸ್.ಈಶ್ವರಪ್ಪ, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ದಿನಾಂಕ: 09/02/2022ರಂದು ವಿಧಾನಸೌಧದ ಬಳಿ ಭಾರತೀಯ ನಾಗರೀಕರ ರಾಷ್ಟ್ರ ಭಾವನೆಗೆ ಹಾನಿಯಾಗುವಂತೆ ಹಾಗೂ ದೇಶದಲ್ಲಿ ನಾಗರೀಕರ ಶಾಂತಿಯನ್ನು ಕದಡುವಂತಹ, ಧಾರ್ಮಿಕ ಭಾವನೆ ಹಾಗೂ ಕೋಮು ಗಲಭೆಯನ್ನು ಉಂಟು ಮಾಡುವ ಹೇಳಿಕೆಯನ್ನು ಕೊಟ್ಟಿದ್ದು, ಅವರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದರ ಮೇರೆಗೆ ಹೈ ಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಅರ್ಜಿ ಸಂಖ್ಯೆ: 34/2022 ರೀತ್ಯಾ ದಾಖಲು ಮಾಡಿರುತ್ತಾರೆ.<br><br>ಸದರಿ ದೂರು ಅರ್ಜಿಯು ವಿಧಾನಸೌಧ ಪೊಲೀಸ್ ಠಾಣೆಗೆ ಸಂಬಂಧಿಸಿರುವುದರಿಂದ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಿಂದ ಸಂಖ್ಯೆ:34/ಕ್ಯೂ3ಪಿಎಸ್/ಸಾಮಾನ್ಯ ಅರ್ಜಿ/2022. ದಿನಾಂಕ: 17/02/2022 ರಲ್ಲಿ ವರ್ಗಾವಣೆ ಮಾಡಲಾಗಿರುತ್ತದೆ. ದಿನಾಂಕ: 17/02/2022 ರಂದು ಸಂಜೆ 18-30ಗಂಟೆಗೆ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಸ್ವೀಕರಿಸಿ ಠಾಣಾ ಪಿಟಿಷನ್ ನಂಬರ್ 07/2022 ರಲ್ಲಿ ನಮೂದಿಸಿ, ವಿಚಾರಣೆ ಕೈಗೊಂಡಿರುತ್ತದೆ.<br>ಇದೇ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀ ಹನುಮೇಗೌಡ, ಸಾಮಾಜಿಕ ಕಾರ್ಯಕರ್ತ ರವರು ದಿನಾಂಕ:18/02/2022 ರಂದು 10-00 ಗಂಟೆಗೆ ವಿಧಾನಸೌಧ ಪೊಲೀಸ್ ಠಾಣೆಗೆ ನೀಡಿದ ದೂರನ್ನು ಪಡೆದು ಪರಿಶೀಲಿಸಿದ್ದು, ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪಿಟಿಷನ್ ನಂ. 08/2022ರಲ್ಲಿ ನಮೂದಿಸಿರುತ್ತದೆ. ಎರಡೂ ಅರ್ಜಿಗಳ ವಿಚಾರಣೆ ಕೈಗೊಳ್ಳಲಾಗಿದೆ. |
| ಆ | ಬಂದಿದ್ದಲ್ಲಿ: ಅಂತಹವರ ವಿರುದ್ದ ಸರ್ಕಾರ ಸ್ವ-ಇಚ್ಚೆ ಪ್ರಕರಣ ದಾಖಲಿಸಿಕೊಳ್ಳದಿರಲು ಕಾರಣವೇನು? | |

| | | |
|---|---|---|
| ಇ | ಸಾಮಾನ್ಯ ಜನರು ಸಣ್ಣ ತಪ್ಪು ಮಾಡಿದರೆ UAPA ಹಾಗೂ ದೇಶದ್ರೋಹದ ಪ್ರಕರಣ ದಾಖಲಿಸಲಾಗುತ್ತಿದ್ದು, ಸಚಿವರ ವಿರುದ್ಧ ಪ್ರಕರಣ ದಾಖಲಿಸದಿರಲು ಕಾರಣವೇನು? | ಉದ್ಭವಿಸುವುದಿಲ್ಲ. |
| ಈ | ಈ ರಾಜ್ಯದಲ್ಲಿ ಸಚಿವರಿಗೊಂದು ನ್ಯಾಯ ಸಾಮಾನ್ಯ ಜನರಿಗೊಂದು ನ್ಯಾಯ ಇದೆಯೇ? ಹಾಗಿಲ್ಲವಾದಲ್ಲಿ, ಸರ್ಕಾರ ಮೌನ ವಹಿಸಿದ್ದು ಏಕೆ? | ಉದ್ಭವಿಸುವುದಿಲ್ಲ. |

**ಕಡತ ಸಂಖ್ಯೆ : ಹೆಚ್‌ಡಿ15 ಪಿಸಿಕ್ಯೂ 2022**

(ಆರಗ ಜ್ಞಾನೇಂದ್ರ)
ಗೃಹ ಸಚಿವರು